**ಅಸಲು ದಾವಾ ನಂಃ 115/2016**
**ಡಿ.ಡಬ್ಲ್ಯೂಃ 01**

**<u>ದಿನಾಂಕಃ 29.01.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ : ಶ್ರೀ ಜಿ.ಆರ್., 1 ನೇ ಪ್ರತಿವಾದಿ ಪರ ವಕೀಲರಿಂದ</u>**

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆಸಿರುವ ಅಂಶಗಳು ಸರಿ ಹಾಗೂ ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ದಿನಾಂಕಃ 13.01.2006 ರ ಮೂಲ ಕ್ರಯ ಪತ್ರವನ್ನು ನಿಡಿ.1 ಅಂತ, ಪೋಲೋಗ್ರಾಮ್‌ವುಳ್ಳ ಮ್ಯುಟೇಷನ್ ಪ್ರತಿಯನ್ನು ನಿಡಿ.2 ಅಂತ, ಗಣಕೀಕೃತ ಮ್ಯುಟೇಷನ್ ಪ್ರತಿಯನ್ನು ನಿಡಿ.3 ಅಂತ, ಪೋಲೋಗ್ರಾಮ್‌ವುಳ್ಳ ಎರಡು ಪಹಣಿ ಪ್ರತಿಗಳನ್ನು ನಿಡಿ.4 ಮತ್ತು ನಿಡಿ.5 ಅಂತ, 12 ಗಣಕೀಕೃತ ಪಹಣಿ ಪತ್ರಿಕೆಗಳನ್ನು ಕ್ರಮವಾಗಿ ನಿಡಿ.6 ರಿಂದ ನಿಡಿ.17 ಅಂತ, ಋಣಭಾರ ಪ್ರಮಾಣ ಪತ್ರವನ್ನು ನಿಡಿ.18 ಅಂತ, ಋಣಭಾರ ರಾಹಿತ್ಯ ಪತ್ರವನ್ನು ನಿಡಿ.19 ಅಂತ, ಗ್ರಾಮ ನೊಂದಣಿ ಸಂಖ್ಯೆ 1 ನ್ನು ನಿಡಿ.20 ಅಂತ, ಚಕ್ಕುಬಂದಿ ಸರ್ಟಿಫಿಕೇಟನ್ನು ನಿಡಿ.21 ಅಂತ, ಕರಾದಾಯ ರಿಸೀದಿಯನ್ನ ನಿಡಿ.22 ಅಂತ, ಸರ್ವೆ ನಂ. 37 ರ ಮೂಲ ಸರ್ವೆ ಟಿಪ್ಪಣಿ ಪುಸ್ತಕದ ಸ್ಕೆಚ್ ನ ದೃಢೀಕೃತ ನಕಲನ್ನು ನಿಡಿ.23 ಅಂತ, ದಿನಾಂಕಃ 09.08.2016 ರ ಪತ್ರದ ಸ್ವೀಕೃತಿಯನ್ನು ನಿಡಿ.24 ಅಂತ ಹಾಗೂ ದಿನಾಂಕಃ 26.08.2016 ರ ಹಿಂಬರವನ್ನು ನಿಡಿ.25 ಅಂತ ಗುರುತಿಸಲಾಯಿತು.

**( ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.